ಮಲಿನಗೊಂಡು ಉಸಿರಾಟ ದುಸ್ತರವಾಗಿತ್ತು. ಮೂರು ವರ್ಷ ಹಾಗೇ ಮುಂದುವರೆದು ಗಾಳಿ ಇನ್ನೂ ವಿಷಮಯವಾಯಿತು. 1998ರಲ್ಲಿ ಹೊಸದಾಗಿ ರಚನೆಗೊಂಡ 'ವಾತಾವರಣ ಮಾಲಿನ್ಯ ನಿಯಂತ್ರಣ ಪ್ರಾಧಿಕಾರ' ದೆಹಲಿಯ ಗಾಳಿ ಶುದ್ಧೀಕರಣದ ನೀಲನಕ್ಷೆಯ ಕುರಿತು ವರದಿ ಪ್ರಕಟಿಸಿತು. ರಸ್ತೆಯಲ್ಲಿ ಸಾಗಣೆಗೆ ಬಳಸಲಾಗುತ್ತಿರುವ ತ್ರಿಚಕ್ರ ಹಾಗೂ ಡೀಸೆಲ್ ಬಳಕೆಯ ಬಸ್‌ಗಳಿಂದಲೇ ಮಾಲಿನ್ಯ ಹೆಚ್ಚಾದ್ದರಿಂದ, ಅವುಗಳನ್ನೆಲ್ಲ ಗ್ಯಾಸ್ ಬಳಸಿ ಸಂಚರಿಸುವ ವಾಹನಗಳನ್ನಾಗಿ ಬದಲಾಯಿಸಲು ಆಜ್ಞೆ ಮಾಡಿತು. ಈ ರೂಪಾಂತರಕ್ಕೆ ನೀಡಿದ್ದ ಸಮಯ ಕೇವಲ ಎರಡು ವರ್ಷ. 2002ರ ವೇಳೆಗೆ ಅದನ್ನು ಪಾಲಿಸಿದ ನಂತರ ದೆಹಲಿಯಲ್ಲಿ ಸ್ವಲ್ಪ ಮಟ್ಟಿನ ಸುಧಾರಣೆ ಕಂಡು ಬಂತು. ಇದು ಇದ್ದದ್ದು ಕೇವಲ ಎರಡು ವರ್ಷ. 2004ರ ವೇಳೆಗೆ ದೆಹಲಿಯ ರಸ್ತೆಯಲ್ಲಿ ಕಾರುಗಳ ಸಂಖ್ಯೆಯೇ ಹೆಚ್ಚಾಗಿ ಸಮಸ್ಯೆ ಮರುಕಳಿಸಿತು. 2006ರಲ್ಲಿ ದೆಹಲಿ ಸರ್ಕಾರಕ್ಕೆ ನೊಟೀಸ್ ನೀಡಿದ ಉಚ್ಚ ನ್ಯಾಯಾಲಯ, 'ವಾಹನಗಳ ನೋಂದಣಿಯನ್ನು ಕಡಿಮೆ ಮಾಡಿ' ಎಂದು ತಾಕೀತು ಮಾಡಿತು. ಇರುವ ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯ ಕಲ್ಪಿಸಿ ಎಂದೂ ಆದೇಶಿಸಿತು. ಹಾಗಂದಿದ್ದೇ ತಡ ದೆಹಲಿಯ ಹಸಿರು ಪಾರ್ಕ್‌ಗಳನ್ನೆಲ್ಲಾ ಪಾರ್ಕಿಂಗ್ ತಾಣಗಳನ್ನಾಗಿ ಮಾಡಲು ಶೀಲಾ ದೀಕ್ಷಿತ್ ಸರ್ಕಾರ ತುಂಬಾ ಉಮೇದಿನಿಂದ ಕೆಲಸ ಶುರುಮಾಡಿತು. ಮಾಯವಾದ ಪಾರ್ಕ್‌ಗಳ, ಫುಟ್‌ಪಾತ್‌ಗಳ ಕುರಿತು ಸಮಗ್ರ ವರದಿ ತಯಾರಿಸಿ 'ಸಿಎಸ್‌ಇ' ಸಂಸ್ಥೆ ಮತ್ತೆ ನ್ಯಾಯಾಲಯದ ಮೊರೆ ಹೋಯಿತು. 2010ರಲ್ಲಿ ದೆಹಲಿ ಸರ್ಕಾರಕ್ಕೆ ಪರಿಹಾರವನ್ನೂ ಸೂಚಿಸಿತು. ಅದರಂತೆ ನಡೆದ ಸರ್ಕಾರ, 'ಭಾರತ್ ಸ್ಟೇಜ್–4' ಮಾದರಿಯ ಹೊಸ ಬಸ್‌ಗಳನ್ನು ಖರೀದಿಸಿ, ಬಸ್‌ಗೆ ಪ್ರತ್ಯೇಕ ದಾರಿ ಗುರುತು ಹಾಕಿ ಸಂಚಾರ ಪ್ರಾರಂಭಿಸಿತು. ಈಗಿನ ಕೇಜ್ರಿವಾಲ್ ಸರ್ಕಾರ ದಟ್ಟಣೆಯನ್ನು ತಡೆದ ಮಾಲಿನ್ಯ ನಿಯಂತ್ರಿಸಲು ಸರಿ–ಬೆಸ ನಂಬರಿನ ಕಾರ್‌ಗಳನ್ನು ದಿನ ಬಿಟ್ಟು ದಿನ ಬಳಸುವ ಕಾಯಿದೆ ಜಾರಿಗೆ ತಂದು ಗಾಳಿಗೆ ಜೀವ ತುಂಬುವ ಪ್ರಯೋಗ ಮಾಡುತ್ತಿದೆ.

## ಕರ್ನಾಟಕದಲ್ಲಿನ ಪರಿಸರ ಹೋರಾಟಗಳು

### ಬೇಡ್ತಿ ಚಳವಳಿ

ಕರ್ನಾಟಕದ ಮೊದಲ ದೊಡ್ಡ ಮಟ್ಟದ ಪರಿಸರ ಹೋರಾಟ ಪ್ರಾರಂಭವಾದದ್ದು ಉತ್ತರಕನ್ನಡ ಜಿಲ್ಲೆಯ ಬೇಡ್ತಿ ನದಿಗೆ, ಮಾಗೋಡಿನ ಬಳಿ ಅಣೆಕಟ್ಟು ನಿರ್ಮಿಸುವ ಯೋಜನೆ ಪ್ರಾರಂಭಗೊಂಡ ದಿನಗಳಲ್ಲಿ. 'ಅರಣ್ಯ ಜಿಲ್ಲೆ' ಎಂದೇ ಖ್ಯಾತವಾಗಿದ್ದ ಉತ್ತರ ಕನ್ನಡದಲ್ಲಿ ಕಾಲಿಟ್ಟ ಎರಡನೇ ಪರಿಸರ ಅವಘಡ ಇದು. ಇದಕ್ಕೂ ಮುನ್ನ ಪಕ್ಕದಲ್ಲೇ ಹರಿಯುತ್ತಿದ್ದ ಶರಾವತಿ ನದಿಗೆ ಅಡ್ಡಲಾಗಿ ಬೃಹತ್ ಲಿಂಗನಮಕ್ಕಿ ಅಣೆಕಟ್ಟು ನಿರ್ಮಿಸಿ ಲಕ್ಷಾಂತರ ಹೆಕ್ಟೇರ್ ಅರಣ್ಯ ಮುಳುಗಿಸಿ, ಸಾವಿರಾರು ಜನರನ್ನು ಒಕ್ಕಲೆಬ್ಬಿಸಲಾಗಿತ್ತು. 'ಕಾಳಿ ಯೋಜನೆ'ಯಲ್ಲೂ ಸುಪಾ ಪಟ್ಟಣವನ್ನೇ ಮುಳುಗಿಸಿ ಅಣೆಕಟ್ಟು ನಿರ್ಮಾಣವಾದಾಗ ಯಾವ ದೊಡ್ಡ ಪ್ರತಿಭಟನೆಯೂ ನಡೆಯಲಿಲ್ಲ. ಆದರೆ ಅಘನಾಶಿನಿ ಮತ್ತು ಬೇಡ್ತಿ ಕಣಿವೆಗಳ ಜನರ ಎತ್ತಂಗಡಿಗೆ ಪ್ಲಾನ್ ಮಾಡುತ್ತಿದ್ದಾಗ ದೊಡ್ಡ ಮಟ್ಟದ ಪ್ರತಿಭಟನೆ ಎದುರಾಯಿತು.

ಸ್ವಾತಂತ್ರ್ಯ ಹೋರಾಟಕ್ಕೆ ಅನುಪಮ ಕೊಡುಗೆ ನೀಡಿದ್ದ ಜಿಲ್ಲೆಯ ಜನ, 'ನಮ್ಮ ತ್ಯಾಗ ಯಾರಿಗಾಗಿ?', 'ದೊಡ್ಡ ಊರುಗಳ ಬೃಹತ್ ಉದ್ಯಮಗಳಿಗೆ ನಾವ್ಯಾಕೆ ನಮ್ಮ ಬದುಕು ಕಳೆದುಕೊಳ್ಳಬೇಕು?' ಎಂದು ಪ್ರಶ್ನಿಸಿದರು. ಮೊದ ಮೊದಲು ಇದು ಶ್ರೀಮಂತ ಅಡಿಕೆ ಬೆಳೆಗಾರರ ಹುನ್ನಾರವೇ ಇರಬೇಕು, ಅಣೆಕಟ್ಟಿನಿಂದ ಜಮೀನು ಉಳಿಸಿಕೊಳ್ಳಲು ಇವರು ತೆಗೆದಿರುವ ತಗಾದೆ ಎಂದು ಜರಿದವರೂ ಇದ್ದರು. ಆದರೆ 1980ರಲ್ಲಿ ಶಿರಸಿಯಲ್ಲಿ ನಡೆದ ರಾಷ್ಟ್ರಮಟ್ಟದ ಚರ್ಚೆಯೊಂದು ಹೋರಾಟಕ್ಕೆ ಹೊಸ ಆಯಾಮವನ್ನೇ ನೀಡಿತು. ಸಮ್ಮೇಳನಕ್ಕೆ ದೇಶದ ಮೂಲೆ ಮೂಲೆಯ ವಿವಿಧ ಕ್ಷೇತ್ರಗಳ ತಜ್ಞರು ಧಾವಿಸಿ ಬಂದರು. 'ಭಾರತದ ಯಾವ ನೈಸರ್ಗಿಕ ಸಂಪನ್ಮೂಲವೂ ಹರಣವಾಗಬಾರದು. ಪಶ್ಚಿಮ ಘಟ್ಟಗಳು ವಿಶ್ವದ ಅತೀ ಸೂಕ್ಷ್ಮ ಪಾರಿಸಾರಿಕ




ಕರ್ನಾಟಕದಲ್ಲಿ ನಡೆದ 'ಪಶ್ಚಿಮ ಘಟ್ಟಗಳನ್ನು ಉಳಿಸಿ' ಆಂದೋಲನದ ಒಂದು ನೆನಪು